**ದಿಃ 26.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ

ಚಿಟ್ ಫಂಡ್ ವ್ಯವಹಾರವನ್ನು ನಾನೇ ಮಾಡುತ್ತಿದ್ದೆ. ಹಾಗೆ ಚಿಟ್ ಫಂಡ್ ವ್ಯವಹಾರ ನಡೆಸಲು ಲೈಸೆನ್ಸ್ ಇರಲಿಲ್ಲ. ಚಿಟ್ ಫಂಡ್ ವ್ಯವಹಾರ ನಡೆಸುವ ವಿಚಾರವಾಗಿ ದಾಖಲೆ ಉಂಟು. ಸದರಿ ಚಿಟ್ ಫಂಡ್ ವ್ಯವಹಾರದಲ್ಲಿ **20** ಜನ ಸದಸ್ಯರು ಇದ್ದರು. ಸುಮಾರು **11** ವರ್ಷದಿಂದ ಅಂದರೆ ಸುಮಾರು **2011-2012**ನೇ ಸಾಲಿನಿಂದ ಸದರಿ ಚಿಟ್ ಫಂಡ್ ವ್ಯವಹಾರ ನಡೆಸುತ್ತಿದ್ದೇನೆ. ಚಿಟ್ ಫಂಡ್ ಮೊತ್ತ ಒಬ್ಬ ಸದಸ್ಯರಿಗೆ ರೂ.**1**ಲಕ್ಷ ಇರುತ್ತಲಿತ್ತು. ಒಂದು ಚಿಟ್ ಫಂಡ್ ಮುಗಿಯಲು **20** ತಿಂಗಳು ಕಾಲಾವಕಾಶ ಇತ್ತು. ವಾರ್ಷಿಕವಾಗಿ ಎಷ್ಟು ಹಣ ನಿಮ್ಮ ಬಳಿ ಡೆಪಾಸಿಟ್ ಆಗುತ್ತಿತ್ತು ಎಂದರೆ ಸಾಕ್ಷಿ ತಿಂಗಳಿಗೆ ರೂ.**1**ಲಕ್ಷ ಶೇಕರಣೆ ಆಗುತ್ತಿತ್ತು ಎನ್ನುತ್ತಾರೆ.

**2.** ರೂಪಾಯಿ **12**ಲಕ್ಷ ಹಣ ವಾರ್ಷಿಕವಾಗಿ ಹಣ ಶೇಕರಣೆ ಆಗುತ್ತಿರುವಾಗ, ಇನ್‌ಕಂಟ್ಯಾಕ್ಸ್ ನ್ನು ನೀವು ಯಾರ ಹೆಸರಿನಲ್ಲಿ ಪೇ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಇನ್ ಕಂ ಟ್ಯಾಕ್ಸ್ ನಾನು ಮಾಡುತ್ತಿರಲಿಲ್ಲ, ಅದರಿಂದ ನನಗೆ ಯಾವುದೇ ಲಕ್ಷ ಲಕ್ಷ ಇನ್ ಕಂ ಬರುತ್ತಿರಲಿಲ್ಲ ಎನ್ನುತ್ತಾರೆ.

**3.** ಚಿಟ್ ಫಂಡ್ ವ್ಯವಹಾರದ ಹಣವನ್ನು ನಾನು ಕೆನರಾ ಬ್ಯಾಂಕಿಗೆ ಜಮಾ ಮಾಡುತ್ತಿದ್ದೆ. ನಾನು ಜಮೆ ಮಾಡುತ್ತಿದ್ದಂತಹ ಕೆನರಾ ಬ್ಯಾಂಕ್ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ಚಿಟ್ ಫಂಡ್ ನ್ನು ನಾನು ಯಾವುದೇ ನಿಖರವಾದ ಹೆಸರಿನಲ್ಲಿ ಮಾಡುತ್ತಿರಲಿಲ್ಲ, **20** ಜನರ ಹೆಸರಿನಲ್ಲಿ ಅದನ್ನು ನಡೆಸಲಾಗುತ್ತಿತ್ತು.

**4.** ಚಿಟ್ ಫಂಡ್ ವ್ಯವಹಾರದ ಬಗ್ಗೆ ಈ ಪ್ರಕರಣದ ಆರೋಪಿತರಿಗೆ ನೋಟೀಸು ನೀಡುವ ಸಮಯದಲ್ಲಾಗಲೀ, ಪಿರ್ಯಾದಲ್ಲಾಗಲೀ ಹೇಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಾನು ಹೇಳಿದ್ದೆನು ಎನ್ನುತ್ತಾರೆ. ನಾನು ಚಿಟ್ ಫಂಡ್ ವ್ಯವಹಾರ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**5.** ನೌಫಲ್ ಎನ್ನುವವರು ಹೇಳಿದ ಹಾಗೇ ನಾನು ಕೆಲಸ ಮಾಡುವವರು ಹಾಗೂ ಕೇಸು ಹಾಕುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಅಗ್ರೀಮೆಂಟ್ ನಿಪಿ-**13** ರಿಂದ **16** ಗಳನ್ನು ನೌಫಲ್ ಎನ್ನುವವರು ನನ್ನ ಮೂಲಕ ಮೋಸದಿಂದ ಒತ್ತಡ ಪೂರ್ವಕವಾಗಿ ಮಾಡಿಸಿರುವುದು ಎಂದರೆ ಸರಿಯಲ್ಲ. ಅದನ್ನು ಅಲೀಮಮ್ಮನವರೇ ಮಾಡಿಸಿರುತ್ತಾರೆ. ನಿಪಿ-**13** ಅಗ್ರಿಮೆಂಟ್ ನಲ್ಲಿ ನನ್ನ ಪರವಾಗಿ ನೌಫಲ್ ಎಂಬುವವರು **1**ನೇ ಸಾಕ್ಷಿ ಇದ್ದು ಸಹಿ ಮಾಡಿರುತ್ತಾರೆ. ನಿಪಿ-**14** ಅಗ್ರಿಮೆಂಟ್ ನಲ್ಲಿ ನನ್ನ ಪರವಾಗಿ ನೌಫಲ್ ಎಂಬುವವರು **1**ನೇ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅದೇ ರೀತಿ ನಿಪಿ-**15** ಅಗ್ರಿಮೆಂಟ್ ನಲ್ಲಿ ಕೂಡಾ ನನ್ನ ಪರವಾಗಿ ನೌಫಲ್ ಎಂಬುವವರು **1**ನೇ ಸಾಕ್ಷಿಯಾಗಿ ಇರುವಂತಹುದು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-**15** ರಲ್ಲಿ ಹಿಂಬರಹ ಬರೆಸಿದ್ದು, ಅದರಲ್ಲಿ ಸಹ ನನ್ನ ಪರವಾಗಿ ನೌಫಲ್ ರವರು ಸಾಕ್ಷಿ ಇರುತ್ತಾರೆ.

**6.** ನಿಪಿ-**15** ಅಗ್ರೀಮೆಂಟನ್ನು ದಿನಾಂಕ **26.09.2020**ರಲ್ಲಿ ಎರಡನೇ ಪಾರ್ಟಿಯ ಪರವಾಗಿ ಸಾಕ್ಷಿದಾರರಾಗಿ ಅವರ ಮಗಳು ಹಫೀಜಾರವರು ಸಾಕ್ಷಿ ಇರುತ್ತಾರೆ ಎಂದು ಸದರಿ ದಾಖಲೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **27.09.2021**ರಲ್ಲಿ ಮಾಡಿರುವ ಹಿಂಬರಹದಲ್ಲಿ **2**ನೇ ಪಾರ್ಟಿ ಪರವಾಗಿ ಸಾಕ್ಷಿದಾರರು ಇಲ್ಲ. ಆ ಸಮಯದಲ್ಲಿ **2**ನೇ ಪಾರ್ಟಿಯವರ ಮಗಳಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ.

**7.** ನಿಪಿ-**15** ಕರಾರಿನ ಎರಡನೇ ಪಾರ್ಟಿಯವರ ಮಗಳು ಕರಾರಿಗೆ ಸಾಕ್ಷಿಯಾಗಿ ಸಹಿ ಮಾಡಲು ಅರ್ಹರಿಲ್ಲ ಎಂದರೆ ಸರಿಯಲ್ಲ. ನೌಫಲ್ ರವರಿಗೆ ಅಗ್ರೀಮೆಂಟ್ ಆಗುವ ಸಮಯದಲ್ಲಿ ಎಷ್ಟು ಪ್ರಾಯವಾಗಿತ್ತು ಎಂದು ನೆನಪಿಲ್ಲ ಎಂದು ನಂತರ ಅಂದಾಜು **24** ವರ್ಷ ಪ್ರಾಯವಾಗಿರಬಹುದು ಎನ್ನುತ್ತಾರೆ.

**8.** ನೌಫಲ್ ರವರು ನನಗೆ ಹಣ ಕೊಟ್ಟಿದ್ದರು ಎಂದು ಹೇಳಿದ್ದು, ಅವರನ್ನೂ ಸಹ ಅಗ್ರೀಮೆಂಟಿನಲ್ಲಿ **1**ನೇ ಪಾರ್ಟಿಯಾಗಿ ಸೇರಿಸಬೇಕಿತ್ತು ಎಂದರೆ ಸಾಕ್ಷಿ ರೂ.**1**ಲಕ್ಷ ಹಣ ಕೊಟ್ಟ ಬಗ್ಗೆ ಅವರ ಹೆಸರನ್ನು ಸೇರಿಸಿರುತ್ತೇನೆ ಎನ್ನುತ್ತಾರೆ.

**9.** ನಾನು ದಿನಾಂಕ **25.09.2020**ರಲ್ಲಿ ಸತ್ಯಶ್ರೀ ಫೈನಾನ್ಸ್ ಪಾಣೆಮಂಗಳೂರಿನಲ್ಲಿ ನನ್ನ ಮೂರೂವರೆ ಪವನ್ ಬಂಗಾರವನ್ನು ಅಡಮಾನ ಇಟ್ಟ ಬಗ್ಗೆ ನನ್ನಲ್ಲಿ ದಾಖಲೆಗಳು ಇದೆ. ನಾನು ಅಡಮಾನ ಇಟ್ಟ ಬಂಗಾರ ಅಲ್ಲದೇ ನನ್ನಲ್ಲಿ ಬೇರೆ ಬಂಗಾರ ಸಹಾ ಇತ್ತು. ನಿಪಿ-**17** ದಾಖಲೆ ನಾನೇ ಸೃಷ್ಟಿಸಿರುವಂತಹುದು ಎಂದರೆ ಸರಿಯಲ್ಲ. ಫೈನಾನ್ಸ್ ನವರು ಬಿಲ್ ಇಲ್ಲದೇ ಬಂಗಾರವನ್ನು ಅಡಮಾನ ಇಡಲು ಪಡೆಯುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಸತ್ಯಶ್ರೀ ಫೈನಾನ್ಸ್ ಪಾಣೆಮಂಗಳೂರು ರವರನ್ನು ಸಾಕ್ಷಿ ಮಾಡಿಸಬಹುದು.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

**ನ ಉ ರೀ ಬ ನ್ಯಾ ಬಿ ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ.**